ಶ್ರೀ ವಾಟಾಳ್ ನಾಗರಾಜ್: ಒಂದು ತಮ್ಮಲ್ಲಿ ನಾವು ಕಳಕಳಿಯಿಂದ ವಿನಂತಿ ಮಾಡುತ್ತೇವೆ. ಏನೆಂದರೆ, ನಿಮ್ಮ ವಿಚಾರಧಾರೆ ನಮಗೆ ಅರ್ಥವಾಯಿತು. ತಾವು ಒಪ್ಪಿಗೆ ಸೂಚಿಸಿದ್ದೀರಿ, ಅಲ್ಲಿ ಏನು ನಡೆಯುತ್ತಿದೆ, ನೋಡೋಣ ಎಂದು ಹೇಳಿದ್ದೀರಿ. ಅಂದ ಮೇಲೆ ಒಂದು ಸದನ ಸಮಿತಿ ಮಾಡಿ, ಸದನ ಸಮಿತಿ ಮಾಡಿದರೆ ಇಡೀ ಬೆಂಗಳೂರು ನಗರದಲ್ಲಿ ಇರತಕ್ಕಂತಹ ಎಲ್ಲಾ ಸರ್ಕಾರಿ ಆಸ್ಪತ್ರೆಗಳಿಗೆ ಭೇಟಿ ಮಾಡೋಣ.

ಶ್ರೀ ಇಕ್ಬಾಲ್ ಅನ್ಸಾರಿ: ಮಾನ್ಯ ಉಪಾಧ್ಯಕ್ಷರೆ, ನಾವು ವಿಕ್ಟೋರಿಯಾ ಆಸ್ಪತ್ರೆಗೆ ಭೇಟಿ ನೀಡಿದ ನಂತರ ಎಲ್ಲ ಎಮ್ಎಲ್ಎಗಳಿಗೂ ಕರೆದುಕೊಂಡು ಹೋಗುತ್ತೇವೆ. ಹೋದ ಮೇಲೆ ಬಹಳ ಗಂಭೀರತೆ ಇದ್ದರೆ ಆಗ ಸದನ ಸಮಿತಿ ಬಗ್ಗೆ ಏನು ಕ್ರಮ ತೆಗೆದುಕೊಳ್ಳಬೇಕು ತೆಗೆದುಕೊಳ್ಳುತ್ತೇವೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ಬೆಂಗಳೂರು ನಗರದ ಶಾಸಕರಿಗೆ ಹಾಕಿ ಒಂದು ಸಮಿತಿ ಮಾಡಿ ಅವರು ಹೋಗಿ ಬರಲಿ, ನಮಗೆ ಬೇಡ. ಬೆಂಗಳೂರು ಸಿಟಿಯಲ್ಲಿ ಇರುವ ಶಾಸಕರುಗಳಿಗೆ ಹಾಕಿ ಒಂದು ಸಮಿತಿ ಮಾಡಿ ಅವರು ವರದಿ ಕೊಡಲಿ.

ಶ್ರೀ ನೆ.ಲ. ನರೇಂದ್ರಬಾಬು: ಸಮಿತಿ ವರದಿಗಿಂತ ನೇರವಾಗಿ ಹೋಗಿ ಆಸ್ಪತ್ರೆಗಳ ವಿಚಾರಗಳನ್ನು ತಿಳಿದುಕೊಳ್ಳಬಹುದು. ಸಮಿತಿ ವರದಿ ಬರುವವರೆಗೆ ನಮ್ಮ ಕಾಲಾವಧಿ ಮುಗಿದು ಹೋಗುತ್ತದೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ಇಂಟರೆಸ್ಟೆಡ್ ಎಮ್ಎಲ್ಎ ಹಾಕಿ ಒಂದು ಸದನ ಸಮಿತಿ ಮಾಡಿ.

ಶ್ರೀ ಎಂ.ಪಿ. ಪ್ರಕಾಶ್: ಬೋರ್ಡ್ ಆಫ್ ವಿಸಿಟರ್ಸ್ ಎಂದು ಮಾಡಲಿಕ್ಕೆ ಅವಕಾಶ ಇದೆ. ಪ್ರತಿಯೊಂದು ವಿಷಯಕ್ಕೆ ಸದನ ಸಮಿತಿ ಮಾಡಿದರೆ, ಸಂಪೂರ್ಣವಾದ ಪರಿಹಾರ ಸಿಗಲಿಕ್ಕೆ ಸಾಧ್ಯವಿಲ್ಲ. ಮಾನ್ಯ ಸಚಿವರು ಸಮರ್ಥವಾಗಿ ಉತ್ತರ ಕೊಟ್ಟಿದ್ದಾರೆ. ಬೋರ್ಡ್ ಆಫ್ ವಿಸಿಟರ್ಸ್ ಮಾಡುತ್ತೇವೆ. ಬೋರ್ಡ್ ಆಫ್ ವಿಸಿಟರ್ಸ್ ಜೊತೆ ಇವರನ್ನೆಲ್ಲಾ ಕರೆದುಕೊಂಡು ಅಲ್ಲಿಗೆ ಹೋಗುತ್ತೇವೆಂದು ಹೇಳಿದ್ದಾರೆ. ಆದ್ದರಿಂದ ಇದನ್ನು ಇಲ್ಲಿಗೇ ಬಿಡುವುದು ಒಳ್ಳೆಯದು ಎಂದು ಕಾಣಿಸುತ್ತದೆ.

ಉಪಾಧ್ಯಕ್ಷರು: ತಡೆಹಿಡಿಯಲಾದ ಪ್ರಶ್ನೆಗಳು, ಕೃಷ್ಣ ಪಾಲೆಮಾರ್ ಅವರು ಇಲ್ಲ.

ಶ್ರೀ ಡಿ. ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು): ಮಾನ್ಯ ಉಪಾಧ್ಯಕ್ಷರೆ, ಚುಕ್ಕೆ ಗುರುತಿಲ್ಲದ ಪ್ರಶ್ನೆಗಳ 20ನೇ ಪಟ್ಟಿಯಲ್ಲಿರುವ 135 ಪ್ರಶ್ನೆಗಳ ಪೈಕಿ 120

ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡುವ ಉತ್ತರಗಳನ್ನು ಸಭೆಯ ಮುಂದಿಡುತ್ತೇನೆ.

ಉಪಾಧ್ಯಕ್ಷರು: ಮಂಡಿಸಲಾಯಿತು.

ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಉಪಾಧ್ಯಕ್ಷರು: ಇನ್ನು ಸಭೆಯ ಮುಂದಿಡಲಾದ ಕಾಗದ ಪತ್ರಗಳು.

ಶಾಸನ ರಚನೆ

ವಿಧೇಯಕದ ಮಂಡನೆ

ಕರ್ನಾಟಕ ಭೂ ಸುಧಾರಣಾ (ಎರಡನೇ ತಿದ್ದುಪಡಿ) ವಿಧೇಯಕ, 2005 ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು): ಮಾನ್ಯ ಉಪಾಧ್ಯಕ್ಷರೇ, 2005ರ ಕರ್ನಾಟಕ ಭೂ ಸುಧಾರಣಾ (ಎರಡನೇ ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೆ:–

"2005ರ ಕರ್ನಾಟಕ ಭೂ ಸುಧಾರಣಾ (ಎರಡನೇ ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು"

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು): ಮಾನ್ಯ ಅಧ್ಯಕ್ಷರೆ, 2005ರ ಕರ್ನಾಟಕ ಭೂ ಸುಧಾರಣಾ (ಎರಡನೇ ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಉಪ ಸಭಾಧ್ಯಕ್ಷರು: ವಿಧೇಯಕವನ್ನು ಮಂಡಿಸಲಾಗಿದೆ.

ಕರ್ನಾಟಕ ನ್ಯಾಯವಾದಿಗಳ ಕಲ್ಯಾಣನಿಧಿ(ತಿದ್ದುಪಡಿ) ವಿಧೇಯಕ, 2005 ಪರ್ಯಾಲೋಚನಾ ಪ್ರಸ್ತಾವ

ಶ್ರೀ ಹೆಚ್.ಕೆ. ಪಾಟೀಲ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): (ಮಾನ್ಯ ಮುಖ್ಯಮಂತ್ರಿಗಳ ಪರವಾಗಿ): ಮಾನ್ಯ ಉಪಾಧ್ಯಕ್ಷರೆ, 2004ರ ಕರ್ನಾಟಕ ನ್ಯಾಯವಾದಿಗಳ ಕಲ್ಯಾಣನಿಧಿ ತಿದ್ದುಪಡಿ ವಿಧೇಯಕವನ್ನು ಪರ್ಯಾಲೋಚಿಸ ಬೇಕೆಂದು ಕೋರುತ್ತೇನೆ.